ಓ ಎಸ್ 48/2013 ಪಿ.ಡಬ್ಲ್ಯೂ: 1

ದಿನಾಂಕ: 12/9/2018

ಇಂದು ದಿ:12/9/2018 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ: ವಾದಿಪರ ವಕೀಲರಿಂದ:

ನಾನು ಈ ದಿವಸ ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ನನ್ನ ವಕೀಲರು ತಯಾರು ಮಾಡಿದ್ದು, ಅದನ್ನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ. ನಾನು ನನ್ನ ಪ್ರಕರಣದ ಸಮರ್ಥನೆಗಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು , ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ ಪಿ 1 ರಿಂದ 3 | ಬಸವನಪುರ ಗ್ರಾಮದ ಸರ್ವೆ ನಂ.17 ಇದರ 2010 – 11 ರಿಂದ 2012 – 13 ರ ವರೆಗಿನ 3 ಆರ್ ಟಿ ಸಿ ಗಳು. |
| ನಿ ಪಿ 4 ಮತ್ತು 6 | ಅಡಕನಹಳ್ಳಿ ಗ್ರಾಮದ ಸರ್ವೆ ನಂ.179 ಇದರ 2010 – 11 ರಿಂದ 2012 – 13 ರ ವರೆಗಿನ ಆರ್ ಟಿ ಸಿ. |
| ನಿ ಪಿ 7 | ಉಪನೋಂದಣಾಧಿಕಾರಿಗಳಿಗೆ ನೀಡಿದ ನೋಟೀಸಿನ ಕಛೇರಿ ಪ್ರತಿ. |
| ನಿ ಪಿ 8 ಮತ್ತು 9 | ಭೂಸ್ವಾಧೀನಾಧಿಕಾರಿಗಳಿಗೆ ನೀಡಿದ 2 ನೋಟೀಸಿನ ಕಛೇರಿ ಪ್ರತಿಗಳು. |

ವಾದಿಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.